ಬರುವಹಾಗೆ ಮಾಡುತ್ತೀರಾ ? ಎರಡನೆಯುದು ಎ. ಆರ್. ಡಬ್ಲ್ಯೂ. ಎಸ್ ಮತ್ತು ಎಸ್. ಎಸ್. ಡಬ್ಲ್ಯೂ. ಎಸ್. ಸರ್ಕಾರಕ್ಕೆ ಬಂದು ಬಹಳ ಸಮಯವಾದರೂ ಗ್ರ್ಯಾಂಟ್ ಕೊಡದೆ ಉಳಿಸಿಕೊಂಡಿದ್ದೀರಿ. ಇದನ್ನು ಬೇಗ ಮಾಡಿಕೊಡುತ್ತೀರಾ ? ಮೂರನೇಯದು, ಪ್ರೈವೇಟ್‌ನಲ್ಲಿ ೩೨ ರೂಪಾಯಿಗಳನ್ನು ಒಂದು ಆಡಿಗೆ ಚಾರ್ಜ್ ಮಾಡುತ್ತಾರೆ, ಆದರೆ ನೀವು ೬೪ ರೂಪಾಯಿ ಕೊಡುತ್ತಿದ್ದೀರಿ. ಈ ವ್ಯತ್ಯಾಸಕ್ಕೆ ಏನು ಕಾರಣ ? ದಯವಿಟ್ಟು ಈ ಅಂತರವನ್ನು ಪರಿಹರಿಸಿದರೆ ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಏಗುತ್ತದೆ, ಇದರ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಈ ವಿಚಾರದ ಬಗ್ಗೆ ಕ್ರೋಢೀಕೃತವಾದಂಥ ಕೆಲಸ ಆಗುವುದರ ಬಗ್ಗೆ ವಿವಾದ ಇಲ್ಲ. ಈ ಬಗ್ಗೆ ತಾವು ಜಿಲ್ಲಾ ಪರಿಷತ್ತುಗಳಲ್ಲಿ ಮಾತನಾಡಬಹುದು. ನಾವು ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದರೆ ೩೪ ರೂಪಾಯಿ ಮತ್ತು ೬೪ ರೂಪಾಯಿಗಳ ರೇಟ್‌ನಲ್ಲಿ ವ್ಯತ್ಯಾಸ ಏನಿದೆ, ನನಗೆ ತಿಳಿದುಬಂದಂತೆ ನೋವಾಟರ್ ನೋಮನ ಬೇಸಿಸ್ ಮೇಲೆ ಮಾಡುತ್ತಾರೆ. ಈಗ ಆರೆ ಸರ್ಕಾರಿ ಸ್ವಾಮ್ಯಕ್ಕೆ ಒಳಪಡತಕ್ಕಂಥ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನವರಿಗೆ ಕೊಟ್ಟಿಂಥ ಸಂದರ್ಭದಲ್ಲಿ ಆಕಸ್ಮಾತ್ತಾಗಿ ವಿಫಲವಾದಂಥ ಬಾವಿ ಇದ್ದರೆ ನೀರು ಬಾರದೇ ಇದ್ದರೆ ಸಾಲ ರೈತರ ಮೇಲೆ ಬೀಳುವುದಿಲ್ಲ. ಖಾಸಗಿಯವರಾದರೆ ನೀರು ಬರಲಿ, ಬಾರದೇ ಇರಲಿ ೩೪ ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ. ಆದ್ದರಿಂದ ಈ ವ್ಯತ್ಯಾಸ ಇರಬಹುದು. ಈ ವಿಚಾರದ ಬಗ್ಗೆ ಪ್ರತ್ಯೇಕವಾದಂಥ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಪಟವಂಕ್ಕ ರತ್ನಾಕರ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕಿರು ನೀರಾವರಿ ಸರಬರಾಜು ಯೋಜನೆ ಇಲ್ಲವೆಂದು ಹೇಳಿದ್ದಾರೆ. ದಯವಿಟ್ಟು ಸರ್ಕಾರದವರು ಇದನ್ನು ಯಾವ ಕಾರಣಕ್ಕೋಸ್ಕರ ನಿಲ್ಲಿಸಿದ್ದಾರೆ ಎಂದು ಹೇಳಬೇಕು. ಇಲ್ಲ, ಇದನ್ನು ಶಾಶ್ವತವಾಗಿ ನಿಲ್ಲಿಸಿದ್ದೀರೋ ಅಥವಾ ಹಣಕಾಸಿನ ತೊಂದರೆಯಿಂದ ಸದ್ಯಕ್ಕೆ ನಿಲ್ಲಿಸಿದ್ದೀರೋ ಎಂದು ಹೇಳಬೇಕು ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಕೂಡಲೇ ಕೋಪಿಸಿಕೊಳ್ಳುವುದಿಲ್ಲವೆಂದು ಭಾವಿಸುತ್ತೇನೆ. ಕಿರು ನೀರಾವರಿ ಎಂದರೆ ಅವರು ಹೇಳಿದ್ದು ೮೫ರ ಹಿಂದಿನ ಮೂರು ವರ್ಷಗಳಲ್ಲಿ ಅನುಷ್ಠಾನಕ್ಕೆ ತಂದಿರುವ ಯೋಜನೆಗಳು ಎಷ್ಟು ಎಂದು. ೮೫ರ ಹಿಂದೆ ಕಿರು ನೀರಾವರಿ ಯೋಜನೆ ಇರಲಿಲ್ಲ. ನಮ್ಮ ಜನತಾ ಪಕ್ಷ ಅಧಿಕಾರಕ್ಕೆ ಬಂದನಂತರ ಈ ಯೋಜನೆ ಪ್ರಥಮವಾರಿಗೆ ೮೫ ರಿಂದೀಚೆಗೆ ಅನುಷ್ಠಾನ ಆಗಿದೆ. ಹಿಂದಿನ ಮೂರು ವರ್ಷಗಳಲ್ಲಿ ಈ ಯೋಜನೆ ಜಾರಿಯಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಈ ಕಾರಣಕ್ಕಾಗಿ ನಾನು ಇಲ್ಲವೆಂದು ಹೇಳಿದ್ದೇನೆ.

ಶ್ರೀ ಪಟವಂಕ್ಕ ರತ್ನಾಕರ್.—ಇಲ್ಲಿ ಮುಖ್ಯವಾಗಿರತಕ್ಕಂಥಾದ್ದು.....

ಉಪಾಧ್ಯಕ್ಷರು —ದಯವಿಟ್ಟು ಕುಳಿತಕೊಳ್ಳಿ, ಸಾಕಷ್ಟು ಹೊತ್ತಾಯಿತು. ಶ್ರೀ ನೀಲಕಂಠಪ್ಪ ನವರೇ, ನಿಮ್ಮ ಪ್ರಶ್ನೆಯನ್ನು ಕೇಳಿ.

ತರೀಕೆರೆ ತಾಲ್ಲೂಕಿನಲ್ಲಿ ಕೊಡಿಯುವ ನೀರು ಸರಬರಾಜು ಯೋಜನೆಯ ಬಗ್ಗೆ.

೭೯೧. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಕೊಡಿಯುವ ನೀರು ಸರಬರಾಜು ಯೋಜನೆಯನ್ನು (ನಲ್ಲಿ ನೀರು) ಅಳವಡಿಸಲಾಗಿದೆ ?

ಆ) ಹಲಸೂರು ಮತ್ತು ಇತರೆ ಜೋಡಿ ಗ್ರಾಮಕ್ಕೆ ಮತ್ತು ಮಳಲಿಚನ್ನೇನ ಹಳ್ಳಿ, ಹೆಚ್. ರಂಗಾಪುರದ ಗ್ರಾಮಗಳಿಗೆ, ನೀರು ಸರಬರಾಜು ಯೋಜನೆ ಮಾಡಲು ಜಿಲ್ಲಾಪರಿಷತ್ ಮತಿಯಿಂದ ಸರ್ಕಾರಕ್ಕೆ ಮನವಿ ಮಾಡಿದೆಯೇ ?

ಇ) ಹಾಗಿದ್ದಲ್ಲಿ, ಇದನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯಂತ್ ರಾಜ್ ಹಾಗೂ ವಕ್ಫ್ ಖಾತೆ ಮಂತ್ರಿಗಳು).—

ಅ) ಎನ್. ಆರ್. ಡಬ್ಲ್ಯೂ. ಎಸ್	—	೧೭
ಎ. ಆರ್. ಡಬ್ಲ್ಯೂ. ಎಸ್.	—	೮
ಒಟ್ಟು		೨೫

ಅ) ಹಲಸೂರು ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ ೮೭-೮೮ನೇ ಸಾಲಿನಲ್ಲಿ ಮಂಜೂರಾಗಿದೆ ೮೮-೮೯ನೇ ವರ್ಷದ ಅಂತ್ಯದಲ್ಲಿ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಮಳಲಿಚನ್ನೇನಹಳ್ಳಿ ಮತ್ತು ಹೆಚ್. ರಂಗಾಪುರ ಗ್ರಾಮಗಳ ನೀರು ಸರಬರಾಜು ಯೋಜನೆ ಜಿಲ್ಲಾ ಪರಿಷತ್ ವತಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿಲ್ಲ.

ಇ) ಉತ್ತರ ''ಅ''

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಯೇ ಒಂದೂ ಇವರು ಕೊಟ್ಟಿರತಕ್ಕ ಉತ್ತರವೇ ಒಂದು. ನಾನು ಕೇಳಿದ ಪ್ರಶ್ನೆ ಎನ್. ಆರ್. ಡಬ್ಲ್ಯೂ. ಎಸ್. ಯೋಜನೆಯನ್ನು ಅರ್ಧ ಕಿಲೋ ಮೀಟರ್, ಮುಕ್ಕಾಲು ಕಿಲೋ ಮೀಟರಿನಲ್ಲಿ ಬರತಕ್ಕ ೪-೫ ಹಳ್ಳಿಗಳನ್ನು ಸೇರಿಸಿ, ಈ ಯೋಜನೆಯನ್ನು ಜಾರಿಗೆ ಕೊಡಿ ಎಂದು ಕೇಳುತ್ತಿದ್ದೇನೆ. ಹಲಸೂರು ಮತ್ತು ಮಳಲಿಚನ್ನೇನಹಳ್ಳಿ ಗ್ರಾಮಗಳು ಸಂತ್ತ ೪-೪ ಗ್ರಾಮಗಳು ಮುಕ್ಕಾಲು ಕಿಲೋಮೀಟರೊಳಗೆ ಬರುತ್ತವೆ. ಜಿಲ್ಲಾ ಪರಿಷತ್ತಿನಿಂದ ಈ ಯೋಜನೆ ಸರ್ಕಾರಕ್ಕೆ ಬಂದಿದೆ. ಇದಕ್ಕೆ ಸರ್ಕಾರದಲ್ಲಿ ಅಪ್ರೂವಲ್ ಕೊಡುತ್ತಾ ಇಲ್ಲ. ಈ ಯೋಜನೆಗೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎಂದು ಕೇಳಿದ್ದೇನೆ, ಇದಕ್ಕೆ ಸಮರ್ಪಕವಾದ ಉತ್ತರಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮಾಭಿವೃದ್ಧಿ ಸಚಿವರ ಪರವಾಗಿ).—ಮಾನ್ಯ ಉಪಾಧ್ಯಕ್ಷರೇ, ಮಳಲಿ ಚೆನ್ನೇನಹಳ್ಳಿ ಗ್ರಾಮದ ಜನಸಂಖ್ಯೆ ೧೯೮೧ರ ಜನಗಣತಿ ಪ್ರಕಾರ ೧೬೪೧ ಇದ್ದುದು ಈಗ ೧೮೪೧ ಆಗಬಹುದು ಎಂಬ ನಿರೀಕ್ಷೆ ಇದ್ದು, ೧೯೯೫-೯೦ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಈಗಾಗಲೇ ಸೂಚನೆ ಮಾಡಲಾಗಿದೆ. ಇನ್ನು ರಂಗಾಪುರ ಕೇವಲ ೫೬೧ ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿಗೆ ನಳದ ಯೋಜನೆಯನ್ನು ಆಳವಡಿಸುವುದಕ್ಕಾಗುವುದಿಲ್ಲ. ಏಕೆಂದರೆ, ಈ ಯೋಜನೆಯ ಮಾರ್ಗಸೂಚಿಯ ಪ್ರಕಾರ ಅಲ್ಲಿಗೆ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ, ಗುಂಪು ಗ್ರಾಮಗಳನ್ನು ಕ್ರೋಢೀಕರಿಸಿ, ಒಂದು ಯೋಜನೆಯನ್ನು ಮಾಡಬೇಕೆಂಬ ಪ್ರಸ್ತಾಪ ಇದ್ದರೆ, ಇದರ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—೪-೫ ಹಳ್ಳಿಗಳು ಒಂದು ಕಿಲೋ ಮೀಟರ್ ಒಳಗೇ ಬರುತ್ತವೆ. ಇಂತಹ ಹಳ್ಳಿಗಳನ್ನು ಸೇರಿಸಿ, ಕೊಡಬಹುದು. ಆದರೆ ಜನಗಣತಿ ಪ್ರಕಾರ ಕೊಡುವುದಕ್ಕಾಗುವುದಿಲ್ಲ ವೆಂದು ಹೇಳುತ್ತಾರೆ. ಈ ಯೋಜನೆ ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಅಪ್ರೂವಲ್ ಆಗಿದೆ. ಇದನು ಏಕೆ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಸರ್ಕಾರದವರು ಏಕೆ ಇಂತಹವುಗಳಿಗೆ ಅನುಮತಿ ಕೊಡಬಾರದು?

ಶ್ರೀ ಎಂ. ಪಿ. ಪ್ರಕಾಶ್.—ಇದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚುವ ಬಗ್ಗೆ.

೪೮೫. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಾಣ ಮಾಡಿದ ನಿವೇಶನಗಳು ಮತ್ತು ಕಟ್ಟಿದ ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಇರುವ ಧೋರಣೆಯನ್ನು ಅನುಸರಿಸಲಾಗುತ್ತಿದೆಯೇ ?